# ಕುವೆಂಪು ಮೆಚ್ಚಿದ 'ಕರ್ನಾಟಕ ವಿಶ್ವವಿದ್ಯಾಲಯ'

## ■ ಚೆನ್ನವೀರ ಕಣವಿ

1949ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ವಿಶ್ವವಿದ್ಯಾಲಯ ಪ್ರಾರಂಭದಲ್ಲಿ, ಸರ್ಕಾರಿ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿಯೇ ತನ್ನ ನೆಲೆಯನ್ನು ಕಂಡುಕೊಂಡಿತ್ತು. ಪ್ರಪ್ರಥಮ ಆಯ್ಕೆಗೊಂಡ ಕುಲಪತಿ ಎನಿಸಿದ ಸಿ.ಸಿ. ಹುಲಕೋಟಿ ಅವರ ಅವಧಿಯಲ್ಲಿ ಈಗಿನ ವಿಶ್ವವಿದ್ಯಾಲಯದ ಆವರಣಕ್ಕೆ ಅದು ಸ್ಥಳಾಂತರಗೊಂಡಿತು. ಮೊದಲಿನಿಂದಲೂ ಈ ಸ್ಥಳಕ್ಕೆ 'ಛೋಟಾ ಮಹಾಬಳೇಶ್ವರ' ಎಂದೆ ಹೆಸರಿತ್ತು. ಈಗಿರುವಂತೆ 800ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ವಿಸ್ತೀರ್ಣಗೊಂಡ ವಿಶ್ವವಿದ್ಯಾಲಯದ ಆವರಣದಲ್ಲಿ ಎರಡು ಸುಸಜ್ಜಿತ ಅತಿಥಿಗೃಹಗಳು, ನೂರಾರು ಪ್ರಾಧ್ಯಾಪಕರ ನಿವಾಸಗಳು, ಕುಲಪತಿ ಮತ್ತು ಕುಲಸಚಿವ ವಾಸಸ್ಥಾನಗಳು ಕಂಗೊಳಿಸುತ್ತವೆ.

ಆಡಳಿತಕ್ಕೆ ಪ್ರತ್ಯೇಕ ಕಟ್ಟಡ, ಸುಸಜ್ಜಿತ ಐವತ್ತಕ್ಕೂ ಹೆಚ್ಚು ಸ್ನಾತಕೋತ್ತರ ವಿಭಾಗಗಳ ವಿದ್ಯಾಸೌಧ, ವಿಜ್ಞಾನ ವಿಭಾಗಗಳಿಗೆ ಪ್ರತ್ಯೇಕ ಕಟ್ಟಡಗಳು, ವಿಸ್ತೃತವಾದ ಶಿ.ಶಿ. ಬಸವನಾಳ ಗ್ರಂಥಾಲಯ, ಪ್ರಸಾರಾಂಗ, ಸುವರ್ಣ ಸ್ಮಾರಕ ಭವನ, ಕನ್ನಡ ಅಧ್ಯಯನ ಪೀಠ, ಡಾ. ಬಿ.ಆರ್. ಅಂಬೇಡ್ಕರ್ ಭವನ, ಬಸವೇಶ್ವರ ಪೀಠದ ಅನುಭವ ಮಂಟಪ, ಕನಕ ಪೀಠ, ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರ ಇತ್ಯಾದಿ ಸ್ಥಳಗಳು ಕಣ್ಣು ತುಂಬುತ್ತವೆ.

> ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿದ್ಯಾಸೌಧ
> ಅತ್ತ ಬೆಳುವಲ, ಇತ್ತ ಮಲೆನಾಡ ಜರಿ ಸೆರಗು
> ಸುತ್ತ ಪರ್ವತ ನೀಲಿ, ಗುಡ್ಡ ಕೊಳ್ಳವ ಇಳಿದು
> ಏರಿ ಚಿಗುರಿದ ಹಸಿರು, ಕೆಲದಿ ಕನ್ನಡಿ ಹಿಡಿದು
> ನಿಂತ ಕೆಲಗೇರಿ ಕೆರೆ, ಗೆರೆ ಕೊರೆದು ಬರುವ ಜುಗು–ಜುಗು ರೈಲು
> ತಗ್ಗು–ದಿನ್ನೆಯನೇರಿ ಯಾವುದೋ ಹಿಗ್ಗಿನಲಿ ನುಗ್ಗಿ ಬರುತಿದೆ ಬಸ್ಸು.
> ನಿತ್ಯದುದ್ಯೋಗದಲಿ ಅತ್ತ ಹೊರಳಿದೆ ನಗರ.
> ನೆತ್ತಿಯಲಿ ಹತ್ತು ದಿಕ್ಕಿನ ಮೋಡ; ಏರೇರಿ ಬಂದವದೋ!
> ಸಂಜೆ ಸೂರ್ಯನ ಹೊನ್ನಕಿರಣಗಳ ಸ್ವಂಜಿನೊಲು
> ಹೀರಿ ಹಿಂಜಿದ ಕಣಿವೆ–ಕಂದರದ ಸೌಂದರ್ಯ.
> ಕೈ ಎತ್ತಿದರೆ ನಿಲುಕುವಾಗಸದ ಔದಾರ್ಯ.
> ಇರುಳು ದೀಪಾವಳಿಯ ಹೆಜ್ಜೆಯಲಿ ಬಂದವೊಲು
> ಸಾಲು ವಿದ್ಯುದ್ದೀಪ, ಗೋಪುರದ ತುತ್ತತುದಿ
> ಗಡಿಯಾರ ನಡೆಯಲಿದೆ: ಕಾಲೋಹಿ ನಿರವಧಿ;
> –ಚೆನ್ನವೀರ ಕಣವಿ (1959)

ಕರ್ನಾಟಕ ರಾಜ್ಯದ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಹಾಗೂ ಇಡೀ ರಾಜ್ಯದ ಉನ್ನತ ಶಿಕ್ಷಣ ಅಕಾಡೆಮಿಗೆ ಈ ಆವರಣದಲ್ಲಿಯೇ ಸ್ಥಳ ಒದಗಿಸಲಾಗಿದೆ. ಪ್ರತಿಯೊಂದು ಕಟ್ಟಡಗಳೂ ಸದಾ ಹಸಿರುಮಯ ಉದ್ಯಾನಗಳಿಂದ ಆವೃತಗೊಂಡಿವೆ. ಪ್ರತ್ಯೇಕವಾದ, ವಿಸ್ತಾರವಾದ ಸಸ್ಯೋದ್ಯಾನವೂ ಆವರಣದ ಮಧ್ಯದಲ್ಲಿಯೇ ಇದೆ. ಶಾಲ್ಮಲಾ ಹಾಸ್ಟೆಲ್, ನಿಜಲಿಂಗಪ್ಪ ಹಾಸ್ಟೆಲ್, ಅಕ್ಕಮಹಾದೇವಿ ಹಾಸ್ಟೆಲ್ (ವಿದ್ಯಾರ್ಥಿನಿಯರಿಗೆ) – ವಿದ್ಯಾರ್ಥಿಗಳ ಅನುಕೂಲಕ್ಕಿರುವ ಮೂರು ವಸತಿಗೃಹಗಳಲ್ಲಿ ಮೊದಲೆಯದು ಶಾಲ್ಮಲಾ ನದಿಯ ಉಗಮಸ್ಥಾನದಲ್ಲಿದೆ.

ವಿಶ್ವವಿದ್ಯಾಲಯದ ಆವರಣಕ್ಕೆ ಎರಡು ಮಹಾದ್ವಾರಗಳಿವೆ. ಒಂದು ಬದಿಗೆ ರೇಲ್ವೆ ಲೈನ್ ಇದೆ. ದಿನವೂ ನೂರಾರು ಸಿಟಿ ಬಸ್‌ಗಳ ಓಡಾಟ ನಡದೇ ಇರುತ್ತದೆ.

ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿ ಹಾಕಿದವರು ಕುಲಪತಿ ಡಾ. ಡಿ.ಸಿ. ಪಾವಟೆಯವರಾಗಿದ್ದರಿಂದ, ಇಡೀ ಆವರಣಕ್ಕೆ 'ಪಾವಟೆನಗರ' ಎಂದು ಹೆಸರು ಕೊಡಲಾಗಿದೆ. ಧಾರವಾಡದ ಪ್ರೇಕ್ಷಣೀಯ ಸ್ಥಳಗಳಲ್ಲಿ ಎರಡು ದೃಷ್ಟಿಯಿಂದ ಇದು 'ಉನ್ನತ ಮಟ್ಟ'ದಲ್ಲಿದೆ. ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ, 1957ರಲ್ಲಿ, ಇಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನ' ನಡೆದಾಗ ಸಮ್ಮೇಳನದ ಅಧ್ಯಕ್ಷರಾದ ಕುವೆಂಪು ಅವರನ್ನು ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿಯೇ ಇಳಿಸಲಾಗಿತ್ತು. ಕುವೆಂಪು ಅವರಿಗೆ ಈ ವಿಶ್ವವಿದ್ಯಾಲಯದ ನಿಸರ್ಗ ಸೌಂದರ್ಯ ತುಂಬ ಹಿಡಿಸಿತ್ತು.




## ■ ಸಿದ್ಧಲಿಂಗ ಪಟ್ಟಣಶೆಟ್ಟಿ

ಕರ್ನಾಟಕದ ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ಆಡಳಿತ, ನ್ಯಾಯಾಂಗ, ವಿಜ್ಞಾನ, ತತ್ವಜ್ಞಾನ, ರಂಗಭೂಮಿ, ಸಂಗೀತ, ಕ್ರೀಡೆ, ಸಮಾಜಸೇವೆ ಮುಂತಾದ ಕ್ಷೇತ್ರಗಳಿಗೆ ಅವಿಸ್ಮರಣೀಯ ಕೊಡುಗೆ ನೀಡಿದ ತೀರ್ಥಸ್ಥಳ ಧಾರವಾಡದ ಕರ್ನಾಟಕ ಕಾಲೇಜು.

ಆ ಮೊದಲೇ 500 ವರ್ಷಗಳಷ್ಟು ಹಳೆಯದಾಗಿದ್ದ ವಿಶಿಷ್ಟ ತೇಗದ ಮರಗಳನ್ನು ಶ್ರೀಲಂಕಾದಿಂದ ಆಯ್ದು ತಂದು 1887ರಲ್ಲಿ ಉತ್ತರಾಭಿಮುಖವಾಗಿ ಕಟ್ಟಿದ್ದ ಬ್ರಿಟಿಷ್ ಗಾಥಿಕ್ ಕಲಾಶೈಲಿಯ ಕೆಂಪು ಕಟ್ಟಡದಲ್ಲಿ ಆಗಿನ ಸದರ್ನ್ ಮರಾಠಾ ರೇಲ್ವೆಯ ಮುಖ್ಯ ಕಚೇರಿಯಿತ್ತು. ಅದನ್ನು ಮದ್ರಾಸ್‌ಗೆ ಸ್ಥಳಾಂತರಿಸಿದಾಗ, 1917ರಲ್ಲಿ ಅದೇ ಕಟ್ಟಡದಲ್ಲಿ ಆರಂಭಗೊಂಡ 'ಕರ್ನಾಟಕ ಕಾಲೇಜು', ಅಂದಿನಿಂದ ಇಂದಿನವರೆಗೂ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ' ತನ್ನ ಚುಂಬಕ ಗಾಳಿಯನ್ನು ನಿರಂತರವಾಗಿ ಹರಿಸುತ್ತಿದೆ.

ಶ್ರೀನಿವಾಸ ರೊದ್ದ, ಅರಟಾಳ ರುದ್ರಗೌಡ; ನಂತರ ಸಿದ್ದಪ್ಪ ಕಂಬಳಿ ಅವರು ಶ್ರಮವಹಿಸಿ ಆರಂಭಿಸಿದ ಈ ಕಾಲೇಜಿನಲ್ಲಿ ಕಲಿಯುವುದು–ಕಲಿಸುವುದು ತಮ್ಮ ಬದುಕಿನ ಪುಣ್ಯಫಲವೆಂದೇ ಭಾವಿಸಿದ ಅಸಂಖ್ಯ ಗಣ್ಯ ವ್ಯಕ್ತಿಗಳು ಇಲ್ಲಿ ಆಗಿಹೋಗಿದ್ದಾರೆ. ಅಂಥರಿಗೆ ಇದು ಸದಾಜಾಗೃತ ಆರಾಧನಾ ಮಂದಿರ. ಕೆ.ಜಿ. ಕುಂದಣಗಾರ, ಅ.ತು. ಸಾಸನೂರ, ಶ್ರೀರಂಗ, ಎ.ಸಿ. ಫ್ರಾರನ್, ವಿ.ಕೃ. ಗೋಕಾಕ, ಸ.ಸ. ಮಾಳವಾಡ, ಸಂ.ಶಿ. ಭೂಸನೂರಮಠ, ವಿ.ಎಂ. ಇನಾಮದಾರ, ಜಿ.ಎಸ್. ಆಮೂರ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಶ್ರೀನಿವಾಸ ಹಾವನೂರ, ಎಸ್.ಆರ್. ಮಳಗಿ, ಹಳ್ಳಿಕೇರಿ ಗುದ್ಲೆಪ್ಪ, ಎನ್ಕೆ ಕುಲಕರ್ಣಿ, ವಿ.ಕೆ.ಆರ್.ವಿ. ರಾವ್, ಆರ್ಮಾಂದೊ ಮೆನೆಝಿಸ್, ಡಿ.ಸಿ.